ದಿಃ 23.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಡಿ.ಎಸ್, ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. M.C.42/2021 ರ ಆದೇಶ ಪುರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, M.C.42/2021 ರ ಆದೇಶದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಡಿಕ್ರಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, M.C.42/2021 ರ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, M.C.42/2021 ರಲ್ಲಿ ಅರ್ಜಿದಾರರು ಸಲ್ಲಿಸಿರುವ ಮುಖ್ಯ ವಿಚಾರಣೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, M.C.42/2021 ರಲ್ಲಿ ಹಾಜರು ಮಾಡಿರುವ ಮದುವೆಯ ಆಮಂತ್ರಣ ಪತ್ರಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಎದುರುದಾರರ ಅಧಾರ್ ಕಾರ್ಡಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ನನ್ನ ಆಧಾರ್ ಕಾರ್ಡಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ನ್ಯಾಯಾಲಯದಿಂದ M.C.42/2021 ರಲ್ಲಿ ನೀಡಿರುವ ನೋಟೀಸಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಅಂಚೆ ಲಕೋಟೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 10.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಡಿ.ಎಸ್, ವಕೀಲರಿಂದ ಅರ್ಜಿದಾರರ ಪರವಾಗಿ

3. ಚಿಕ್ಕಮಗಳೂರಿನ ಎಸ್.ಪಿ ರವರಿಗೆ ದಿಃ 04.01.2024 ರಂದು ನಾನು ನೀಡಿದ ದೂರಿನ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.11 ಎಂದು, ಮೂಡಿಗೆರೆಯ ಪೊಲೀಸ್ ಠಾಣೆಗೆ ನಾನು 07.03.2024 ರಂದು ನೀಡಿದ ದೂರಿನ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.12 ಎಂದು, ಅಂಚೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು, ಮೂಡಿಗೆರೆ ಪಿ.ಎಸ್.ಐ ರವರಿಗೆ ಅಂಚೆ ಮೂಲಕ ಸಲ್ಲಿಸಿದ ದೂರು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.14 ಎಂದು, ದಿಃ 18.10.2024 ರಂದು ಚಿಕ್ಕಮಗಳೂರಿನ ಎಸ್.ಪಿ. ರವರಿಗೆ ನಾನು ಸಲ್ಲಿಸಿದ ದೂರಿನ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.15 ಎಂದು, ಅಂಚೆ ರಸೀದಿಯನ್ನು ನಿ.ಪಿ.16 ಎಂದು, ಚಿಕ್ಕಮಗಳೂರಿನ ಎಸ್.ಪಿ ರವರಿಗೆ ಅಂಚೆ ಮೂಲಕ ಸಲ್ಲಿಸಿದ ದೂರು ಜಾರಿಯಾದ ಬಗ್ಗೆ Track Consignment ಅನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.17 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಎದುರುದಾರರ ಪರವಾಗಿ

4. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 02.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ಎಂ.ಆರ್. ವಕೀಲರಿಂದ ಎದುರುದಾರರ ಪರವಾಗಿ

5. ನನ್ನ ಮತ್ತು ಎದುರುದಾರನ ಮದುವೆ 1998 ರಲ್ಲಿ ಜರುಗಿತ್ತು. ಮದುವೆಯಾದ ಬಳಿಕ ನಾನು ಎದುರುದಾರನ ಜೊತೆ ಕಡುವಳ್ಳಿಯಲ್ಲಿ ವಾಸವಿದ್ದೆ. ನಮಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಇಬ್ಬರು ಮಕ್ಕಳು ಬೆಂಗಳೂರಿನಲ್ಲಿ ಇದ್ದರೂ ಈಗ ತಂದೆಯ ಜೊತೆ ಮೂಡಿಗೆರೆಯಲ್ಲಿ ವಾಸವಿದ್ದಾರೆ. ಎದುರುದಾರನ ತಾಯಿ ಕಡುವಳ್ಳಿಯಲ್ಲಿ ವಾಸವಿದ್ದರೂ ಈಗ ಎದುರುದಾರನ ಜೊತೆ ಮೂಡಿಗೆರೆಯಲ್ಲಿ ವಾಸವಿದ್ದಾರೆ. ಎದುರುದಾರರ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ.

6. ನಾನು ಎದುರುದಾರನ ವಿರುದ್ದ ಮೂಡಿಗೆರೆಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನನ್ನು ಎದುರುದಾರ 2023 ಆಗಸ್ಟ್ ತಿಂಗಳಲ್ಲಿ ಹಣದ ವಿಚಾರದಲ್ಲಿ ನನ್ನನ್ನು ಮನೆಯಿಂದ ಆಚೆ ಹಾಕಿದ್ದರು. ಅದಕ್ಕೂ ಮೊದಲು ನಾನು ಮತ್ತು ಎದುರುದಾರ ಚೆನ್ನಾಗಿದ್ದೆವು. ನಾನು ಈಗ ವಾಸವಿರುವ ಮನೆ ನನ್ನ ಅತ್ತೆ ದಾನ ಪತ್ರ ಬರೆದುಕೊಟ್ಟ ನಂತರ ನನ್ನ ಹೆಸರಿನಲ್ಲಿ ಬರುತ್ತಿದೆ. 5 ವರ್ಷದ ಹಿಂದೆ ಆ ದಾನ ಪತ್ರವನ್ನು ನನ್ನ ಅತ್ತೆ ನನಗೆ ಬರೆದುಕೊಟ್ಟಿದ್ದರು. ನಾನು ವಾಸವಿರುವ ಮನೆಯ ಪಕ್ಕದಲ್ಲಿ ಇರುವ ಇನ್ನೊಂದು ಮನೆ ಖಾಲಿ ಇರುತ್ತದೆ. ನಾನು ಈ ಅರ್ಜಿಯಲ್ಲಿ ಕಾಣಿಸಿರುವ ವಿಳಾಸ ಕಡುವಳ್ಳಿ ಗ್ರಾಮ, ಹಳಸೆ ಅಂಚೆ ಎಂದರೆ ಸರಿ. ಎದುರುದಾರರು ನನ್ನ ವಿರುದ್ದ ಸಲ್ಲಿಸಿದ್ದ MC 42/2021 ನ್ನು ದಾಖಲಿಸಿದಾಗ ನಾನು ವಾಸವಿದ್ದ ಬೀಜುವಳ್ಳಿ ಗ್ರಾಮ, ಹಳಸೆ ಅಂಚೆಯಲ್ಲಿ ಬರುತ್ತದೆ ಎಂದರೆ ಸಾಕ್ಷಿ ನಾನು ಕಡುವಳ್ಳಿಯಲ್ಲಿ ವಾಸವಿದ್ದೆ ಎಂದು ನುಡಿಯುತ್ತಾರೆ. ನಾನು ಎದುರುದಾರ ಮತ್ತು ಆಕೆಯ ತಾಯಿಯೊಂದಿಗೆ ಗಲಾಟೆ ಮಾಡಿಕೊಂಡು ಬೀಜುವಳ್ಳಿ ಗ್ರಾಮದಲ್ಲಿ ವಾಸವಿದ್ದರೂ ಸಹ ಕಡುವಳ್ಳಿಯಲ್ಲಿ ವಾಸವಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. MC 42/2021 ರಲ್ಲಿ ನ್ಯಾಯಾಲಯದಿಂದ ಬಂದ ನೋಟೀಸನ್ನು ನಾನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿದ್ದೇನೆ ಎಂದರೆ ಸಾಕ್ಷಿ ನ್ಯಾಯಾಲಯದಿಂದ ನನಗೆ ಯಾವುದೇ ನೋಟೀಸ್ ಬಂದಿಲ್ಲ ಎಂದು ನುಡಿಯುತ್ತಾರೆ. MC 42/2021 ರಲ್ಲಿ ಎದುರುದಾರ ಸಲ್ಲಿಸಿದ ಅರ್ಜಿ ಅಂಗೀಕರ ಆದ ಬಳಿಕ ನಾನು ಕಡುವಳ್ಳಿಗೆ ಹೋಗಿ ಎದುರುದಾರ ಮತ್ತು ಆತನ ತಾಯಿಯ ಜೊತೆ ಗಲಾಟೆ ಮಾಡಿದ್ದೆ ಎಂದರೆ ಸುಳ್ಳು. ಎದುರುದಾರನ ಮತ್ತು ಆತನ ತಾಯಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಎದುರುದಾರ ಮತ್ತು ನನ್ನ ಮಕ್ಕಳನ್ನು ಮನೆಯಿಂದ ಆಚೆ ಹಾಕಿದ್ದೆ ಎಂದರೆ ಸುಳ್ಳು. ಈ ಅರ್ಜಿಯನ್ನು ಎದುರುದಾರನಿಗೆ ತೊಂದರೆ ನೀಡಲು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ